ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ನಷ್ಟೈತ ಮಾಡಿರತಕ್ಕ ಪಂಪ್‌ಸೆಟ್‌ಗಳಲ್ಲಿ ಮುಕ್ಕಾಲು ಭಾಗ ಸ್ಟಾರ್ಟರುಗಳು ಸರಿಯಿಲ್ಲ ಎಂದು ವಾಪಸು ಕೊಟ್ಟಿದ್ದಾರೆ. ಅವುಗಳನ್ನು ರೀಪ್ಲೇಸ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಸರ್ಕಾರದ ಗಮನಕ್ಕೆ ತಂದರೆ ಖಂಡಿತವಾಗಿ ಪರಿಶೀಲನೆ ಮಾಡಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಬೈರಪ್ಪಾಜಿ.—ಪಂಪ್‌ಸೆಟ್ಟುಗಳನ್ನು ನಷ್ಟೈತ ಮಾಡಿದಾಗ ಅದರ ಹಣವನ್ನು ಮರು ಪಾವತಿ ಮಾಡುವುದಕ್ಕೆ ಗೊತ್ತು ಮಾಡಿರುವ ಅವಧಿಯನ್ನು 8 ವರ್ಷದಿಂದ 10 ವರ್ಷಕ್ಕೆ ಹೆಚ್ಚಿಸುವುದರಿಂದ ರೈತರಿಗೆ ಸ್ವಲ್ಪ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆ. ಈಗೆ ಮಾಡುವುದಕ್ಕೆ ಇರುವ ತೊಂದರೆ ಏನು, ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಒಂದು ಪಂಪ್ ಸೆಟ್ಟಿನ 'ಲೈಫ್' 8 ವರ್ಷ ಎಂದು ರೆಕ್ಕ ಇಟ್ಟುಕೊಂಡು 8 ವರ್ಷದ ಕಂತುಗಳು ಎಂದು ಗೊತ್ತು ಮಾಡಿದ್ದೇವೆ.

---

## Gradation Lists of I and II Division Clerks working under Divisional Commissioner, Gulbarga.

*Q.—137. Sri MAHANTASWAMY (Shahapur). –

Will the Government be pleased to state :—

(*a*) whether the Government is aware that Gradation lists in respect of the posts of First Division and Second Division Clerks as on 1st January 1957 onwards working under Divisional Commisioner, Gulbarga, has not been finalised ;

(*b*) whether it is a fact that many irregular promotions in Gulbarga Division have been regularised without finalisation and preparation of Gradation list ?

*A.—Sri M. V. KRISHNAPPA (Minister for Revenue).—

(*a*) Gradation lists of First Division and Second Division Clerks have been finalised up-to-date.

(*b*) No.

ಶ್ರೀ ಮಹಂಥಸ್ವಾಮಿ.—ಪ್ರಥಮ ಮತ್ತು ದ್ವಿತೀಯ ದರ್ಜೆ ಗುಮಾಸ್ತರ ಸೀನಿಯಾರಿಟಿ ಪಟ್ಟಿಯನ್ನು ಯಾವಾಗ ನಿರ್ಧರಿಸಲಾಯಿತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಳೆದ ವರ್ಷದಲ್ಲಿ ಮಾಡಿದೆವು, ತಾರೀಖು ಗೊತ್ತಿಲ್ಲ.

---

## Collection of Foodgrains by Government under the Levy of Foodgrains Scheme.

*Q.—195. Sri A. J. DODDAMETI (Ron).—

Will the Government be pleased to state :—

(*a*) the quantity of food grains collected by Government under the levy of foodgrains scheme during the years 1964-65 and 1965-66 in the State (Districtwise information regarding paddy and jowar may be furnished separately) ;